**ದಿನಾಂಕಃ 13.01.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಎದುರುದಾರರ ಪರ ವಕೀಲರಿಂದಃ**

ನನ್ನ ಬಳಿ ಡಿ ಎಲ್ ಇದೆ ಅದನ್ನು ಹಾಜರು ಮಾಡಿದ್ದೇನೆ. ನಾನು ವಾಹನ ಚಾಲನೆ ಮಾಡುವಾಗ ಹೆಲ್ಮೆಟ್ ಧರಿಸಿದ್ದೆ. ದಾಖಲೆ ಪೋಲಿಸರಿಗೆ ಕೊಟ್ಟಿದ್ದೆ. ಸಾಕ್ಷಿಗೆ ಈಗ ದಿನಾಂಕ 17.04.2023 ರಂದು ಬಿ ಇ ಓ ರವರಿಗೆ ಕೊಟ್ಟಂತಹ ಅರ್ಜಿ ತೋರಿಸುತ್ತಿದ್ದು, ಅದನ್ನು ಸಾಕ್ಷಿ ಒಪ್ಪಿಕೊಂಡಿದ್ದು, ಅದನ್ನು **ನಿಆರ್-1** ಎಂದು ಗುರುತಿಸಲಾಗಿದೆ. ವೈದ್ಯಕೀಯ ವೆಚ್ಚವನ್ನು ಮರು ಪಾವತಿ ಮಾಡಿಕೊಡಬೇಕೆಂದು ಫಾರಂ ಭರ್ತಿ ಮಾಡಿ ಬಿ ಇ ಓ ರವರಿಗೆ ಕೊಟ್ಟಿದ್ದು, ಅದನ್ನು ಸಾಕ್ಷಿ ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು **ನಿಆರ್-2** ಎಂದು ಗುರುತಿಸಲಾಗಿದೆ. ಅದರೊಂದಿಗೆ ಚೆಕ್ ಲಿಸ್ಟ್ ಕೊಟ್ಟಿದ್ದು, ಅದನ್ನು **ನಿಆರ್-3** ಎಂದು ಗುರುತಿಸಲಾಗಿದೆ. ದಿನಾಂಕ 01.09.2023 ರಂದು ನನಗೆ ನೀಡಿರುವ ಹಿಂಬರಹವನ್ನು **ನಿಆರ್-4** ಎಂದು ಗುರುತಿಸಲಾಗಿದೆ. ನಾನು ನೀಡಿದಂತಹ ಮನವಿಗಳನ್ನು ಪರಿಶೀಲಿಸಿ ಬಿ ಇ ಓ ರವರು 1,40,250/- ನ್ನು ನಿಪಿ-23 ರಂತೆ ಮಂಜೂರು ಮಾಡಿರುತ್ತಾರೆಂದರೆ ಸರಿ. ನಾನು ಮಾಡಿರುವ ಖರ್ಚು ಈಗಾಗಲೇ ಮರು ಪಾವತಿ ಆಗಿರುತ್ತದೆ ಎಂದರೆ ಸರಿ. 2,25000/- ಕೇಳಿ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ತಪ್ಪು ಮಾಹಿತಿ ನೀಡಿ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದಿನಾಂಕ 02.02.2023 ರಿಂದ 09.02.2023 ರ ಗಳಿಕೆ ರಜೆ ಪಡೆದುಕೊಂಡಿದ್ದು, ಆ ಅವಧಿ ಯಲ್ಲಿ ನನಗೆ ಸಂಭಳ ಬಂದಿರುತ್ತದೆ ಎಂದರೆ ಸರಿ. ಹೆಚ್ಚಿ ನ ಪರಿಹಾರ ಹಣ ಪಡೆಯುವ ಸಲುವಾಗಿ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ವೈದ್ಯಕೀಯ ವೆಚ್ಚವನ್ನು ಮರು ಪಾವತಿ ಮಾಡಿಕೊಂಡಿರುತ್ತೇನೆಂಬ ವಿಷಯವನ್ನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ. ಎದುರುದಾರರು ನನಗೆ ಯಾವುದೇ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ದೊಡ್ಡಬಳ್ಳಾಪುರ**